ವೈಯಕ್ತಿಕವನ್ನು ವಿಶ್ವಾತ್ಮಕವಾಗಿಸುವ ಗುಣವುಳ್ಳ, ಹಗುರ ಹಾಸ್ಯ, ವ್ಯಂಗ್ಯ, ಬಿಚ್ಚು ಮನಸ್ಸಿನ ಕವಿತೆಗಳಿಗಾಗಿ ಲೂಯಿಸ್ ಗ್ಲುಕ್ ಅವರಿಗೆ ನೊಬೆಲ್ ಪುರಸ್ಕಾರ ಸಂದಿದೆ ಎಂದು ನೊಬೆಲ್ ಸಮಿತಿ ಘೋಷಿಸಿದೆ. ನ್ಯೂಯಾರ್ಕನಲ್ಲಿ 1943ರಲ್ಲಿ ಜನಿಸಿದ ಲೂಯಿಸ್ ಗ್ಲುಕ್, 1968ರಲ್ಲಿ 'ಫಸ್ಟ್ ಬಾರ್ನ್' ಎಂಬ ದ್ವಿರುಕ್ತಿಯ ಶೀರ್ಷಿಕೆಯುಳ್ಳ ಸಂಕಲನದಿಂದ ತಮ್ಮ ಕಾವ್ಯಯಾನವನ್ನು ಶುರುಮಾಡಿದರು. ಈ ಯಾನ 2014ರಲ್ಲಿ ಪ್ರಕಟವಾದ ಅವರ 'ಫೇಥ್‌ಫುಲ್ ಅಂಡ್ ವರ್ಚುವಸ್ ನೈಟ್' ವರೆಗೆ ಸಾಗುತ್ತ ಅಮೆರಿಕದಲ್ಲಿ ಕಾವ್ಯಕ್ಕೆ ಕೊಡಲಾಗುವ ಎಲ್ಲ ಗೌರವಗಳನ್ನೂ ತನ್ನದಾಗಿಸಿಕೊಂಡು, ಕಾವ್ಯ ವಿದ್ವಾಂಸರ, ವಿದ್ಯಾರ್ಥಿಗಳ ಹಾಗೂ ಸಮಸ್ತ ಓದುಗ ವರ್ಗದ ಅಂತರಂಗದೊಳಗೆ ಇಳಿಯುತ್ತ, ಬೆಳೆಯುತ್ತ ಸಾಗಿಬಂದಿದೆ. ಈವರೆಗೆ ಅವರು 12 ಕವಿತಾ ಸಂಗ್ರಹಗಳನ್ನು ಮತ್ತು ಸಾಹಿತ್ಯಿಕ ಪ್ರಬಂಧಗಳ ಅನೇಕ ಕೃತಿಗಳನ್ನು ಪ್ರಕಟಿಸಿದ್ದಾರೆ.

ಲೂಯಿಸ್ ಗ್ಲುಕ್ ಅವರ ಸಮಗ್ರ ಕವನಗಳ ಸಂಕಲನ 'ಪೋಯೆಮ್ಸ್ : 1962 –2012' ಓದುವಾಗ ಪುಟಪುಟಗಳಿಂದ ಪುಟಿದು ಬರುವ ವ್ಯಾಕುಲ ಮನಸಿನ ಹರಿತ ಧ್ವನಿಯ ತೀಕ್ಷ್ಣ ಚಿತ್ರಣಗಳು ಓದುಗನ ಆಸಕ್ತಿ ಕೆರಳಿಸುತ್ತವೆ, 'ಇದು ಇಷ್ಟೇ' ಎನ್ನಲು ಹೊರಟವನಿಗೆ, 'ಇಲ್ಲ, ಇಲ್ಲ, ಇನ್ನೂ ಏನೋ ಇದೆ ಆಳದಲ್ಲಿ' ಎಂದು ಕೆಣಕುತ್ತವೆ, ಹೃದಯದ ಮೂಲೆಯಲ್ಲಿ ಎಲ್ಲೋ ಚುಚ್ಚುತ್ತವೆ, 'ಖಾಸಗಿ ಸಂಕಟವಿದು' ಎಂದು ಹೇಳಹೊರಟವನಿಗೆ ಸಾರ್ವತ್ರಿಕದ ಎಳೆ ಗೋಚರಿಸಿ ಎಡವಿದಂತಾಗುತ್ತದೆ.

ನನ್ನ ದನಿಯೇ ನನಗೆ ಗೊತ್ತಿರಲಿಲ್ಲ;
ಇದ್ದರದು ದುಃಖದಿಂದಲೇ ತುಂಬಿರುತ್ತದೆ
ಚೀತ್ಕಾರಗಳನ್ನು ಪೇರಿಸಿಟ್ಟಂತಿವೆ ನನ್ನ ವಾಕ್ಯಗಳು.
ಆ ಪದ ಹೊಳೆವ ಮುನ್ನ,
ನನ್ನೊಳಗಿಂದ ಮಳೆ ಸುರಿದು ಹರಿವ ಮುನ್ನ,
ನನ್ನ ನೋವೂ ಕೂಡ ನನಗೆ ಗೊತ್ತಿರಲಿಲ್ಲ. ('ಟ್ರಿಲಿಯಮ್')

**ಜೀವನ ವಿವರ**

| | |
|---|---|
| **ಪೂರ್ಣ ಹೆಸರು:** | ಲೂಯಿಸ್ ಎಲಿಜಬೆಥ್ ಗ್ಲುಕ್ |
| **ಹುಟ್ಟಿದ್ದು:** | 1943, ನ್ಯೂ ಯಾರ್ಕ್, ಅಮೆರಿಕ |
| **ತಂದೆ:** | ಡೇನಿಯಲ್ ಗ್ಲುಕ್ |
| **ತಾಯಿ:** | ಬೀಟ್ರೀಸ್ ಗ್ಲುಕ್ |
| **ವಿದ್ಯಾಭ್ಯಾಸ:** | ಸಾರಾ ಲಾರೆನ್ಸ್ ಕಾಲೇಜು, ಕೋಲಂಬಿಯಾ ವಿಶ್ವವಿದ್ಯಾಲಯ |
| **ವೃತ್ತಿ:** | ಯೇಲ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕಿ |
| **ಮೊದಲ ಸಂಕಲನ:** | 'ಫಸ್ಟ್ ಬಾರ್ನ್' (1968) |
| **ಪ್ರಶಸ್ತಿಗಳು:** | ಪುಲಿಟ್ಜರ್ ಪ್ರಶಸ್ತಿ, ನ್ಯಾಶನಲ್ ಹ್ಯುಮಾನಿಟೀಸ್ ಮೆಡಲ್, ನ್ಯಾಶನಲ್ ಬುಕ್ ಅವಾರ್ಡ್, ಬೋಲಿಂಜನ್ ಪ್ರಶಸ್ತಿ, ಅಮೆರಿಕದ 'ಪೋಯೆಟ್ ಲಾರಿಯೇಟ್', ನೊಬೆಲ್ ಪ್ರಶಸ್ತಿ. |